ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಬುಧವಾರ ತಾರೀಖು ೩೦ನೇ ಮಾರ್ಚ್ ೧೯೮೩/ಚೈತ್ರ ೯, ೧೯೦೫ ಶಕ

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ಹನ್ನೊಂದು ಗಂಟೆಗೆ ಸಮಾವೇಶಗೊಂಡಿತು.

[ಉಪಾಧ್ಯಕ್ಷರು (ಶ್ರೀ ವೀರಣ್ಣ ಅವರು) ಪೀಠವನ್ನು ಅಲಂಕರಿಸಿದ್ದರು]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಕೊಡಲಾದ

ಬಾಯಿ ಮಾತಿನ ಉತ್ತರಗಳು

ಗೋಕಾಕ್ ತಾಲ್ಲೂಕಿನಲ್ಲಿ ಪಶುಸಂಗೋಪನಾ ಔಷಧಾಲಯ ಕೇಂದ್ರ ಸ್ಥಾಪಿಸುವ ವಿಚಾರ

೨೦೮. ಶ್ರೀ ಮ. ಲ. ಮುತ್ತಣ್ಣ (ಗೋಕಾಕ್)

ಮಾನ್ಯ ಪಶುಸಂಗೋಪನಾ, ಪಶುವೈದ್ಯಕೀಯ, ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ.—

ಅ) ಗೋಕಾಕ್ ತಾಲ್ಲೂಕಿನಲ್ಲಿ ಪಶುಸಂಗೋಪನಾ ಔಷಧಾಲಯ ಕೇಂದ್ರವಿಲ್ಲದಿರುವುದು ತಾಲ್ಲೂಕಿನ ರೈತಾಪಿಗಳಿಗೆ ತೊಂದರೆಯಾಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ :

ಆ) ರೈತಾಪಿ ಜನರು ಒಳ್ಳೆ ತಳಿಯ ಹೋರಿ ಹಾಗೂ ಹೈನದ ಜಾತಿಯ ಆಕಳು ಮತ್ತು ಎಮ್ಮೆಗಳನ್ನು ಸಾಕುವುದರಲ್ಲಿ ಆಸಕ್ತಿವುಳ್ಳವರಾಗಿದ್ದು, ಸದರಿ ಕೇಂದ್ರವಿಲ್ಲದಿರುವುದರಿಂದ ಅವರಿಗೆ ತೊಂದರೆಯಾಗುತ್ತಿರುವುದರಿಂದ ಸರ್ಕಾರದವರು ಗ್ರಾಮೀಣ ಪಶುಸಂಗೋಪನಾ ಔಷದ ಕೇಂದ್ರವನ್ನು ಜನರ ಅನುಕೂಲಕ್ಕಾಗಿ ಜಾಗ್ರತೆಯಾಗಿ ಪ್ರಾರಂಭಿಸುವರೇ ?

ಶ್ರೀ ವಿಶ್ವನಾಥರೆಡ್ಡಿ (ಪಶುಸಂಗೋಪನಾ, ಪಶುವೈದ್ಯಸೇವೆ ಹಾಗೂ ತೋಟಗಾರಿಕೆ ಮಂತ್ರಿಗಳು)

ಅ) ಗೋಕಾಕ್ ತಾಲ್ಲೂಕಿನಲ್ಲಿ ಪಶುಸಂಗೋಪನಾ ಔಷಧಾಲಯ ಕೇಂದ್ರ ವಿಲ್ಲದಿರುವುದರ ಬಗ್ಗೆ ಯಾವ ವರದಿಯು ಸರ್ಕಾರಕ್ಕೆ ಬಂದಿಲ್ಲ. ಆದಾಗ್ಯೂ ಮೇಲ್ಕಂಡ ತಾಲ್ಲೂಕಿನಲ್ಲಿ ಗ್ರಾಮೀಣ ಪಶುವೈದ್ಯ ಶಾಲೆಯನ್ನು ತೆರೆಯುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಗೋಕಾಕ್ ತಾಲ್ಲೂಕಿನಲ್ಲಿ ಮೂರು ಪಶುವೈದ್ಯ ಶಾಲೆಗಳು, ಒಂಬತ್ತು ಗ್ರಾಮಾಂತರ ಪಶುವೈದ್ಯ ಶಾಲೆಗಳು, ೨ ಪಶುವೈದ್ಯ ಕೇಂದ್ರಗಳು, ಒಂದು ಕೃತಕ ಗರ್ಭಧಾರಣೆ ಕೇಂದ್ರ ಮತ್ತು ವೀರ್ಯ ಶೇಖರಣಾ ಕೇಂದ್ರ ಇವೆ. ಈ ಸಂಸ್ಥೆಗಳು ಗೋಕಾಕ್ ತಾಲ್ಲೂಕಿನ ರೈತಾಪಿ ಜನರಿಗೆ ಪಶುವೈದ್ಯಕೀಯ ನೆರವು ನೀಡುತ್ತಿವೆ. ರಾಜ್ಯದಲ್ಲಿ ಪಶುವೈದ್ಯಕೀಯ ಉಗ್ರಾಣ ಕೇಂದ್ರವು ಹೆಬ್ಬಾಳದಲ್ಲಿರುವುದು. ರಾಜ್ಯದ ಎಲ್ಲ ಪಶುವೈದ್ಯ ಶಾಲೆಗಳಿಗೆ ಇಲ್ಲಿಂದ ಪಶುವೈದ್ಯಕೀಯ ಚಿಕಿತ್ಸೆಗೆ ಬೇಕಾದಂತ ಔಷಧಿಗಳನ್ನು ಸರಬರಾಜು ಮಾಡಲಾಗುವುದು.

ಶ್ರೀ ಎಂ. ಎಲ್. ಮುತ್ತಣ್ಣನವರ್.—ನಮ್ಮ ತಾಲ್ಲೂಕಿನ ಮೂಡ್ಲಗಿ ಮತ್ತು ಅಂಕಲಗಿಯಲ್ಲಿ ಉತ್ತಮವಾದ ಹೋರಿ ಹಾಗೂ ಹೈನು ಜಾತಿಯ ದನಗಳು ದೊರೆಯದೇ ಇರುವುದರಿಂದ ರೈತಾಪಿ ಜನಗಳಿಗೆ ತೊಂದರೆಯಾಗಿದೆ. ಅಲ್ಲಿರುವ ಪಶುವೈಧ್ಯಶಾಲೆಗಳು ನಾಮಮಾತ್ರಕ್ಕೆ ಶಾಲೆಗಳಾಗಿದ್ದು ರೈತರಿಗೆ ಉಪಯುಕ್ತವಾದ ಔಷಧಿಗಳೂ ದೊರೆಯುತ್ತಿಲ್ಲ. ಹಾಗೂ ಕೆಲಸ ಮಾಡುವ ಕಾರ್ಯಕರ್ತರ

ತೊಂದರೆಯೂ ಇದೆ. ಅಲ್ಲಿ ಕೆಲಸ ಮಾಡುತ್ತಿರುವವರು ರೈತರಿಂದ ಹೆಚ್ಚಿನ ಹಣವನ್ನು ವಸೂಲಿ ಮಾಡುವ ಕಾರ್ಯಕ್ರಮವನ್ನು ಮಾತ್ರ ಮಾಡುತ್ತಿದ್ದಾರೆ. ಗೋಕಾಕ್ ತಾಲ್ಲೂಕಿನಲ್ಲಿ ಸುಸಜ್ಜಿತವಾದ ಪಶುವೈದ್ಯಶಾಲೆ ಇರಬೇಕು. ಮತ್ತೆ ಅಲ್ಲಿ ಹುಲ್ಲುಗಾವಲಿಗೆ ಅವಕಾಶ ಮಾಡಿಕೊಡಬೇಕಾದ ಅವಶ್ಯಕತೆ ಇದೆ. ಮಹಾರಾಷ್ಟ್ರ ಸರ್ಕಾರದಲ್ಲಿ ಈ ಬಗ್ಗೆ ಉತ್ತಮವಾದ ಕಾರ್ಯ ನಡೆಯುತ್ತಿರುವುದರಿಂದ ಮಾನ್ಯ ಮಂತ್ರಿಗಳು ಅದನ್ನು ಅಭ್ಯಸಿಸಿ ನವಂಗೂ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಗ್ರಾಮಾಂತರ ಪ್ರದೇಶಗಳಲ್ಲಿ ಪಶುವೈದ್ಯಶಾಲೆಗಳನ್ನು ತೆರೆಯುವ ಬಗ್ಗೆ ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೋ ಅದನ್ನು ಪರಿಶೀಲನೆ ಮಾಡುತ್ತೇನೆ. ಮಂತ್ರು ಅಧಿಕಾರಿಗಳು ಔಷಧಿಗೆ ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ ಎಂಬ ಸೂಚನೆಯನ್ನು ಕೊಟ್ಟಿದ್ದಾರೆ. ನಿರ್ದಿಷ್ಟವಾದ ಯಾವುದಾದರೂ ಪ್ರಕರಣವನ್ನು ನಮ್ಮ ಗಮನಕ್ಕೆ ತಂದರೆ ಆ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಎಂ. ಎಲ್. ಮುತ್ತಣ್ಣವರ್.—ಗೋಕಾಕ್ ತಾಲ್ಲೂಕು ಗುಡ್ಡಗಾಡು ಪ್ರದೇಶವಾಗಿರುವುದರಿಂದ ಜನರಿಗೆ ಹೆಚ್ಚು ಅನುಕೂಲತೆ ಇಲ್ಲ. ಇದರ ಬಗ್ಗೆ ಯೋಚನೆ ಮಾಡಿ ಹಿಂದುಳಿದವರಿಗೆ ಹೆಚ್ಚಿನ ರಿಯಾಯಿತಿ ಮತ್ತು ಅನುಕೂಲಗಳನ್ನು ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಈ ಬಗ್ಗೆ ವಿವರವಾದ ಸೂಚನೆಯನ್ನು ಕಳುಹಿಸಿದರೆ ಪರಿಶೀಲಿಸಲಾಗುವುದು.

ಇಂಜಿನೀಯರಿಂಗ್ ಡಿಪ್ಲೊಮೋ ವಿದ್ಯಾರ್ಥಿಗಳಿಗೆ ವ್ಯಾಸಂಗದ ಅವಧಿಯನ್ನು ಕಡಿಮೆ ಮಾಡುವ ಬಗ್ಗೆ

೨೦೯. ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್).—ಮಾನ್ಯ ವಿದ್ಯಾಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ತುಮಕೂರು ಶ್ರೀ ಸಿದ್ಧಗಂಗಾ ತಾಂತ್ರಿಕ ಶಿಕ್ಷಣ ಕಾಲೇಜಿನಲ್ಲಿ ಬಿ.ಇ. ಒಂದನೇ ವರ್ಷದ ತರಗತಿಯಲ್ಲಿ ಓದುತ್ತಿರುವ ಡಿಪ್ಲೊಮೊ ವಿದ್ಯಾರ್ಥಿಗಳು ಒಂದು ವರ್ಷದ ವ್ಯಾಸಂಗದ ಅವಧಿಯನ್ನು ೧೯೬೦-೬೧ನೇ ಸಾಲಿನಲ್ಲಿ ಜಾರಿ ಇದ್ದಂತೆ ಕಡಿಮೆ ಮಾಡಬೇಕೇ ಅಥವಾ ವಿಷಯಗಳಲ್ಲಿ ವಿನಾಯಿತಿ ನೀಡಬೇಕೆ ಎಂದು ಸರ್ಕಾರ ಆದೇಶ ಕೋರಿ ಸರ್ಕಾರಕ್ಕೆ ಎಷ್ಟು ಅರ್ಜಿಗಳನ್ನು ಅಥವಾ ವಿಜ್ಞಾಪನಾ ಪತ್ರಗಳನ್ನು ೧೯೬೦ನೇ ಸಾಲಿನಿಂದ ಕೊಟ್ಟಿದ್ದಾರೆ ;

(ಆ) ಮೇಲ್ಕಂಡ ವಿಷಯದ ಬಗ್ಗೆ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಎಷ್ಟು ಅರ್ಜಿಗಳನ್ನು ಈ ಬಗ್ಗೆ ೧೯೬೦ನೇ ಸಾಲಿನಿಂದ ಕೊಡಲಾಗಿದೆ ;

(ಇ) ಮೇಲ್ಕಂಡ ವಿಷಯದ ಬಗ್ಗೆ ಬೆಂಗಳೂರಿನ ವಿಶ್ವವಿದ್ಯಾನಿಲಯವು ಹಾಗೂ ಸರ್ಕಾರ ಏನು ತೀರ್ಮಾನ ಕೈಗೊಂಡಿದ್ದಾರೆ ;

(ಈ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ? ನಿರ್ಧಾರ ತೆಗೆದುಕೊಂಡಿದ್ದರೆ ಆ ನಿರ್ಧಾರವನ್ನು ತುಮಕೂರು ಸಿದ್ಧಗಂಗಾ ಇಂಜಿನಿಯರಿಂಗ್ ಕಾಲೇಜಿಗೆ ಕಳುಹಿಸಲಾಗಿದೆಯೇ ?

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳು).—

(ಅ) ತುಮಕೂರು ಶ್ರೀ ಸಿದ್ಧಗಂಗಾ ತಾಂತ್ರಿಕ ಶಿಕ್ಷಣ ಕಾಲೇಜು ಖಾಸಗೀ ಕಾಲೇಜಾಗಿ ಈ ವಿಷಯವು ಬೆಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಆದರೂ ಈ ವಿಷಯಕ್ಕಾಗಿ ಸಿದ್ಧಗಂಗಾ ಇನ್‌ಸ್ಟಿಟ್ಯೂಟ್‌ನ ಅಭ್ಯರ್ಥಿಗಳು ಸಲ್ಲಿಸಿದ್ದ ಅರ್ಜಿಯನ್ನು ದಿನಾಂಕ ೧೬ನೇ ಫೆಬ್ರುವರಿ ೧೯೬೩ರಲ್ಲಿ ಮುಂದಿನ ಕ್ರಮಕ್ಕಾಗಿ ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಯವರಿಗೆ ಕಳುಹಿಸಿದೆ.